ವಿಭಾಗ ಮಟ್ಟದ 4 ಜಿಲ್ಲೆಗಳಿಗೆ ಪ್ರಾರಂಭಿಸಲಾಗಿರುವ ಪ್ರೌಢಶಾಲೆ ವಸತಿ ಪ್ರಸಾದ ಸೌಲಭ್ಯಗಳು

1917 (2339) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಸರ್ಕಾರದ ವಿಭಾಗ ಮಟ್ಟದ ನಾಲ್ಕು ಜಿಲ್ಲೆಗಳಿಗೆ ಒಂದು ಪ್ರೌಢಶಾಲೆ ವಸತಿ ಪ್ರಸಾದಗಳ ಸೌಲಭ್ಯದೊಂದಿಗೆ ಗ್ರಾಮೀಣ ಪ್ರತಿಭಾವಂತ ಮಕ್ಕಳಿಗಾಗಿ ಪ್ರಾರಂಭಿಸಿರುವುದು ನಿಜವೆ: ಮತ್ತು ಅವುಗಳು ಎಲ್ಲಿ ನಡೆದಿವೆ: ಯಾವ ರೀತಿ ಸೌಲಭ್ಯ ಪಡೆದು ಪ್ರತಿ ವರ್ಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ತಿಳಿಸುವಿರಾ;

ಆ) ಪ್ರತಿಯೊಂದು ವಸತಿ ಪ್ರೌಢಶಾಲೆಯ 10ನೇ ವರ್ಗ ವಿದ್ಯಾರ್ಥಿಗಳು ಕಳೆದ ಐದು ವರ್ಷದಲ್ಲಿ ಪ್ರತಿ ವರ್ಷ ಪರೀಕ್ಷೆಗೆ ಕುಳಿತು ಎಷ್ಟು ವಿದ್ಯಾರ್ಥಿಗಳು ಯಾವ ಯಾವ ಹಂತದಲ್ಲಿ (1ನೇ, 2ನೇ ಮತ್ತು ಪಾಸ್ ವರ್ಗ) ಪಾಸಾಗಿರುವರು ತಿಳಿಸುವಿರೆ;

ಇ) ಧಾರವಾಡದಲ್ಲಿ ನಡೆದಿರುವ ಸರ್ಕಾರಿ ವಸತಿ ಪ್ರೌಢಶಾಲೆಯ ಕಳೆದ ವರ್ಷದಲ್ಲಿ ಎಲ್ಲಾ ವರ್ಗಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಎಷ್ಟು? ಅವರಿಗೆ ವಸತಿ ಕಟ್ಟಡ ಮತ್ತು ಪ್ರಸಾದದ (ಊಟ) ಅನುದಾನ ಪ್ರತಿ ಅಭ್ಯರ್ಥಿಗೆ ನೀಡುತ್ತಿರುವಿರಾ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು. 4 ವಸತಿ ಶಾಲೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ನಡೆಸಲಾಗುತ್ತಿದೆ.

1) ಬೆಂಗಳೂರು ವಿಭಾಗ - ಮಾಯಾಕೊಂಡ
2) ಮೈಸೂರು ವಿಭಾಗ - ನಂಜನಗೂಡು
3) ಬೆಳಗಾಂ ವಿಭಾಗ - ಬಾಗಲಕೋಟೆ
4) ಗುಲ್ಬರ್ಗಾ ವಿಭಾಗ - ಜಗತ

ಈ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಊಟ, ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ ಮತ್ತು ವಿಶೇಷ ಬೋಧನಾವ್ಯವಸ್ಥೆಯನ್ನು ನೀಡಲಾಗುತ್ತಿದೆ.

ಪ್ರತಿ ಶಾಲೆಗಳಲ್ಲಿನ ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಗಿನಂತಿದೆ:

	ಶಾಲೆಯ ಹೆಸರು	ತರಗತಿ			
		8ನೇ	9ನೇ	10ನೇ	ಒಟ್ಟು
1)	ನಂಜನಗೂಡು	32	35	33	100
2)	ಮಾಯಾಕೊಂಡ	25	37	14	76
3)	ಬಾಗಲಕೋಟೆ	43	48	29	120
4)	ಜಗತ	50	34	14	98

ಆ) ಶಾಲಾವಾರು ವಿವರವನ್ನು ಪ್ರತ್ಯೇಕವಾಗಿ ಅನುಬಂಧ-1 ರಲ್ಲಿ ನೀಡಿದೆ.

ಇ) ಕಟ್ಟಡದ ಸೌಲಭ್ಯ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ಕೊರತೆಯಿಂದಾಗಿ ಧಾರವಾಡದ ವಸತಿ ಶಾಲೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಇಡಿ 48 ಎಸ್‌ಇಎಸ್ 99 ದಿನಾಂಕ:18.7.99 ರಲ್ಲಿ ಸಾಮಾನ್ಯ ಶಾಲೆಯಾಗಿ ಪರಿವರ್ತಿಸಿದೆ. ಈ ಕಾರಣದಿಂದಾಗಿ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟಕ್ಕಾಗಿ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ - 1

(ಶಾಲಾವಾರು ಪಟ್ಟಿ)

ನಂಜನಗೂಡು: (10ನೇ ತರಗತಿ)

ವರ್ಷ	ಪರೀಕ್ಷೆಗೆ ಕುಳಿತವರ ಸಂಖ್ಯೆ	ಮೊದಲನೇ ದರ್ಜೆ	ಎರಡನೇ ದರ್ಜೆ	ಮೂರನೇ ದರ್ಜೆ	ಒಟ್ಟು
1994-95	19	03	02	01	06
1995-96	17	06	02	05	13
1996-97	23	00	03	06	10
1997-98	35	00	05	12	17
1998-99	32	06	03	05	14
ಬಾಗಲಕೋಟೆ:					
1994-95	48	02	08	16	26
1995-96	41	03	14	16	33
1996-97	49	02	09	04	15
1997-98	42	00	05	08	13
1998-99	47	02	07	17	26

ವರ್ಷ	ಪರೀಕ್ಷೆಗೆ ಕುಳಿತವರ ಸಂಖ್ಯೆ	ಮೊದಲನೇ ದರ್ಜೆ	ಎರಡನೇ ದರ್ಜೆ	ಮೂರನೇ ದರ್ಜೆ	ಒಟ್ಟು
(ದಾವಣಗೆರೆ) ಮಾಯಾಕೊಂಡ					
1994-95	12	03	02	04	09
1995-96	13	01	02	06	09
1996-97	16	00	01	00	01
1997-98	16	01	04	06	11
1998-99	15	01	03	05	09
ಜಗತ (ಗುಲ್ಬರ್ಗ)					
1994-95	20	01	01	02	04
1995-96	14	00	00	01	01
1996-97	19	00	02	01	03
1997-98	25	00	04	06	10
1998-99	23	01	05	06	12

ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಆಕ್ರಮ ನೇಮಕಾತಿ

1918 (2580) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ಖಾಸಗಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸಿಕೊಂಡ ಜಿಲ್ಲಾವಾರು ಶಾಲೆಗಳು ಯಾವುವು; ಅವುಗಳನ್ನು ನಡೆಸುತ್ತಿರುವ ಸಂಸ್ಥೆಗಳ ಹೆಸರು ಹಾಗೂ ಆ ಸಂಸ್ಥೆಗಳ ಮುಖ್ಯಸ್ಥರು ಯಾರು;

ಆ) ಈ ಅಕ್ರಮವಾಗಿ ಪ್ರಾರಂಭಗೊಂಡ ಶಾಲೆಗಳು ಎಷ್ಟು ಹಾಗೂ ಈ ಶಾಲೆಗಳ ಪ್ರಾರಂಭಕ್ಕೆ ಯಾವ ಅಧಿಕಾರಗಳು ಕಾರಣರು ಹಾಗೂ ಅವರ ಮೇಲೆ ಸರ್ಕಾರದ ಕ್ರಮವೇನು; ವಿವರ ತಿಳಿಸುವುದು;

ಇ) ಈ ಅಕ್ರಮ ಪ್ರಾರಂಭಗೊಂಡ ಶಾಲೆಗಳಿಂದ ಮೂರು ವರ್ಷಗಳಲ್ಲಿ ಸರ್ಕಾರಕ್ಕಾದ ನಷ್ಟ ಎಷ್ಟು? ವಿವರ ತಿಳಿಸುವುದು?